**ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಮಾಡಿಸಲಾಯಿತು.**

**ದಿಃ09-06-2026**

**ಪಾಟೀ ಸವಾಲುಃ ದೂರುದಾರರ ಪರ ಶ್ರೀ ವೈ ಕೆ ವಕೀಲರಿಂದಃ**

ಆರೋಪಿ ಬಾಳೇಗದ್ದೆಯಲ್ಲಿ ವಾಸವಿರುತ್ತಾರೆ. ಅವರ ಮನೆಗೆ ಹೋಗಿರುತ್ತೇನೆ. ಅವರ ಗಂಡನ ಹೆಸರು ಚಂದ್ರಶೇಖರ ಇರುತ್ತದೆ. 2017 ರಲ್ಲಿ ಆರೋಪಿಗೆ ಸಕಲೇಶಪುರದಲ್ಲಿ ಅಪಘಾತವಾಗಿರುತ್ತದೆ. ಹೇಗೆ ಅಪಘಾತವಾಗಿರುತ್ತದೆಂದು ಗೊತ್ತಿಲ್ಲ. 2 ದಿನಗಳ ನಂತರ ನಾನು ಜನಪ್ರಿಯ ಆಸ್ಪತ್ರೆಗೆ ಹೋಗಿರುತ್ತೇನೆ. ಗೋಪಿನಾಥ ಎಂಬುವವರು ಪರಿಚಯವಿರುವುದಿಲ್ಲ. ಆಸ್ಪತ್ರೆಯ ಆವರಣದಲ್ಲಿ ಗೋಪಿನಾಥ ಮತ್ತು ಆರೋಪಿ ಗಂಡ ಜಗಳವಾಡುತ್ತಿದ್ದರು. ಅದಕ್ಕೂ ಪೂರ್ವದಲ್ಲಿ ಅವರು ಗೊತ್ತಿರಲಿಲ್ಲ. ಆನಂತರ ಚಂದ್ರಶೇಖರ ಮೂಲಕ ಅವರ ಹೆಸರು ಗೋಪಿನಾಥ ಎಂದು ಗೊತ್ತಾಗಿರುತ್ತದೆ. ಚಂದ್ರಶೇಖರ ರವರು ಆರೋಪಿಯ ವ್ಯಾನಿಟಿ ಬ್ಯಾಗ್ ನ್ನು ಹಿಡಿದುಕೊಂಡಿದ್ದರು. ಅದು ಮುಚ್ಚಿತ್ತು. ಚಂದ್ರಶೇಖರ ರವರು ಬ್ಯಾಗ್ ನ್ನು ತೆಗೆಯುತ್ತಿದ್ದಾಗ ಗೋಪಿನಾಥ ರವರು ನೋಡಿ ಬ್ಯಾಗ್ ನ್ನು ಕಿತ್ತುಕೊಂಡಿರುತ್ತಾರೆ. ಬ್ಯಾಗ್ ನಲ್ಲಿ 3-4 ಚೆಕ್ ಪುಸ್ತಕಗಳು ಇದ್ದವು. ಗೋಪಿನಾಥ ರವರು ಒಂದು ಚೆಕ್ ಹಾಳೆಯನ್ನು ತೆಗೆದಾಗ ಆರೋಪಿ ಸಹಿ ಮಾಡಿರುವುದು ಕಾಣಿಸಿರುತ್ತದೆ. ಅದಕ್ಕೂ ಪೂರ್ವದಲ್ಲಿ ಆರೋಪಿಯ ಸಹಿಯನ್ನು ನಾನು ನೋಡಿರುವುದಿಲ್ಲ. ಚೆಕ್ ನ ಮೇಲೆ ಇರುವ ಸಹಿ ಆರೋಪಿಯದ್ದೇ ಎಂದು ಗೊತ್ತಿಲ್ಲ ಆದರೆ ಅವರದ್ದೇ ಎಂದುಕೊಂಡಿರುತ್ತೇನೆ.

ಆಸ್ಪತ್ರೆಗೆ ನಾನೊಬ್ಬನೇ ಹೋಗಿರುತ್ತೇನೆ. ಆರೋಪಿ ವಿರುದ್ದ ಗೋಪಿನಾಥ ರವರು ದುರುಪಯೋಗಪಡಿಸಿಕೊಂಡು ಬೇರೆಯವರ ಮೂಲಕ ಕೇಸ ಹಾಕಿಸಿರುತ್ತಾರೆ. ಆರೋಪಿ ಗೋಪಿನಾಥ ರವರು ಚೆಕ್ ಪುಸ್ತಕವನ್ನು ಕಿತ್ತುಕೊಂಡಿರುತ್ತಾರೆಂದು ನನಗೆ ಹೇಳಲು ತಿಳಿಸಿದ್ದರಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಗೋಪಿನಾಥ ರವರು ಚೆಕ್ ಕಿತ್ತುಕೊಂಡಾಗ ನಾನು ದೂರು ನೀಡುವಂತೆ ತಿಳಿಸಿರುತ್ತೇನೆ. ಸದರಿ ದಿನ ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಚಂದ್ರಶೇಖರ ರವರು ಯಾವುದೇ ಬ್ಯಾಗ್ ಅಥವಾ ಚೆಕ್ ಪುಸ್ತಕಗಳನ್ನು ಕಿತ್ತುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಕಟ್ಟುಕತೆಯನ್ನು ಸೃಷ್ಟಿಸಿ ನನಗೆ ಹೇಳಲು ತಿಳಿಸಿದ್ದರಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ವಿರುದ್ದ ಸಾಕಷ್ಟು ಜನ ಕೇಸ ಹಾಕಿರುತ್ತಾರೆ. ಹೊಣೆಗಾರಿಕೆ ತಪ್ಪಿಸುವ ಉದ್ದೇಶದಿಂದ ಆರೋಪಿ ಪರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**